95 ಮತ್ತು ಪ್ರವರ್ಗ 2ಎ ರಲ್ಲಿ 103 ಮುಖ್ಯ ಜಾತಿಗಳಿದ್ದು, ಜಾತಿವಾರು ಆಯವ್ಯಯ ಒದಗಿಸಲು ಸಾಧ್ಯವಿಲ್ಲ. ಆದರೆ ರಾಜ್ಯ ಸರ್ಕಾರವು ಒದಗಿಸುತ್ತಿರುವ ಆಯವಯ್ಯದಲ್ಲಿ ಪ್ರವರ್ಗ–1 ಮತ್ತು ಪ್ರವರ್ಗ–2ಎ ಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ಅದರಲ್ಲಿ ಉಪ್ಪಾರ ಜನಾಂಗದ ಅಭಿವೃದ್ಧಿಗೂ ಸಹ ಆರ್ಥಿಕ ಸೌಲಭ್ಯಗಳನ್ನು ಒದಗಿಸಲು ಕ್ರಮ ವಹಿಸಲಾಗುವುದು. ವಿಶೇಷವಾಗಿ 2008–09 ರಿಂದ ಮೂರು ವರ್ಷಗಳಲ್ಲಿ 9.52 ಕೋಟಿ ರೂ.ಗಳನ್ನು ವೆಚ್ಚ ಮಾಡಿದ್ದೇವೆ. ನಿಗಮದ ವತಿಯಿಂದ 1ಕೋಟಿ 67 ಲಕ್ಷ ರೂ.ಗಳನ್ನು ವೆಚ್ಚ ಮಾಡಿದ್ದೇವೆ. ನಮ್ಮ ಸರ್ಕಾರ ವಿಶೇಷವಾದ ಕಾಳಜಿ ವಹಿಸಿ ಉಪ್ಪಾರ ಜನಾಂಗದವರಿಗೆ ಮುಂದಿನ ಆಯ್ಯವಯದಲ್ಲಿ 10 ಕೋಟಿ ರೂ.ಗಳನ್ನು ಮೀಸಲಾಗಿಡಬೇಕೆಂದು ಯೋಚಿಸಿದ್ದೇವೆ. ರಾಜ್ಯದಲ್ಲಿ 8 ಲಕ್ಷ ಉಪ್ಪಾರ ಸಮಾಜದ ಜನರಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಈ ಬಗ್ಗೆ ಚರ್ಚೆ ಮಾಡಿ, ಮುಂದಿನ ಬಜೆಟ್‌ನಲ್ಲಿ ಈ ಜನಾಂಗಕ್ಕೆ ಹೆಚ್ಚಿನ ಹಣವನ್ನು ಮೀಸಲಿಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

3) ವಿಷಯ : ಚಾಮರಾಜನಗರ ಜಿಲ್ಲೆಯಲ್ಲಿ ಕಂದಾಯ ಇಲಾಖೆಯ ಬ್ಯಾಕ್‌ಲಾಗ್ ಹುದ್ದೆಗಳಿಗೆ ನೇಮಕಾತಿಗೊಂಡವರನ್ನು ಸೇವೆಯಿಂದ ವಜಾ ಮಾಡುತ್ತಿರುವ ಬಗ್ಗೆ

ಡಾ: ಹೆಚ್.ಸಿ. ಮಹಾದೇವಪ್ಪ (ಟಿ.ನರಸೀಪುರ) :– ಮಾನ್ಯ ಅಧ್ಯಕ್ಷರೆ, ಚಾಮರಾಜನಗರ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ 2002 ಮತ್ತು 2004 ರಲ್ಲಿ ಕ್ರಮವಾಗಿ 13 + 13 ರಂತೆ ಒಟ್ಟು 26 ಜನ ನೌಕರರನ್ನು ನೇಮಕಾತಿ ಮಾಡಿಕೊಳ್ಳಲಾಗಿತ್ತು. ವಾಹನ ಚಾಲಕರು, ದ್ವಿತೀಯ ದರ್ಜೆ ಸಹಾಯಕರು, Village Accountants, ಇತ್ಯಾದಿ ಬ್ಯಾಕ್‌ಲಾಗ್ ಹುದ್ದೆಗಳಿಗೆ ಸಮಾಜ ಕಲ್ಯಾಣ ಇಲಾಖೆ Commissioner ರವರ ನಿರ್ದೇಶನದ ಪ್ರಕಾರ ಇವರ ನೇಮಕ ಮಾಡಲಾಗಿತ್ತು. ಇವರು ಸುಮಾರು 6 ರಿಂದ 9 ವರ್ಷಗಳ ಕಾಲ ಸೇವೆಯನ್ನು ಸಲ್ಲಿಸಿದ್ದಾರೆ, ಜ್ಯೇಷ್ಠತೆಯನ್ನೂ ಸಹ ಪಡೆದುಕೊಂಡಿದ್ದಾರೆ. 2004ರಲ್ಲಿ ಇವರು ಕೆಲಸಕ್ಕೆ ಸೇರಿದರು. 2004ರ ನಂತರ ಬಂದಂತಹ ಜಿಲ್ಲಾಧಿಕಾರಿಗಳು, ಇದು ಹೊಸ ಜಿಲ್ಲೆಯಾಗಿರುವುದರಿಂದ, ಇಲ್ಲಿ ಬ್ಯಾಕ್‌ಲಾಗ್ ಹುದ್ದೆಗಳು ಉದ್ಭವಿಸುವುದಿಲ್ಲ ಎಂದು

ಪರಿಗಣಿಸಿ, ಇವರನ್ನು terminate ಮಾಡುವುದಕ್ಕೆ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಈ ಕ್ರಮದ ವಿರುದ್ಧ 2006ರಲ್ಲಿ ಈ ನೌಕರರು KATಗೆ ಹೋಗಿದ್ದಾರೆ. KATಯವರು ಈ ಬಗ್ಗೆ ಸರ್ಕಾರದಿಂದ ನಿರ್ದಿಷ್ಟವಾದ ಆದೇಶ ಬರಬೇಕೆಂದು ಕೇಸ್ ಅನ್ನು 9ನೇ ತಾರೀಖಿಗೆ ನಿಗದಿ ಮಾಡಿದ್ದಾರೆಂದು ತಿಳಿದು ಬಂದಿದೆ. ಹೊಸ ಜಿಲ್ಲೆಯಾದ ಚಾಮರಾಜನಗರ ಜಿಲ್ಲೆಯಂತೆಯೇ, ದಾವಣಗೆರೆ ಜಿಲ್ಲೆಯಲ್ಲಿ 13 ಜನ ಮತ್ತು ಕೊಪ್ಪಳದಲ್ಲಿ 5 ಜನರನ್ನು ನೇಮಕಾತಿ ಮಾಡಿಕೊಂಡಿದ್ದಾರೆ. ಅವರಿಗೆ ಅನ್ವಯಿಸದಿರುವುದು ನಮ್ಮ ಚಾಮರಾಜನಗರ ಜಿಲ್ಲೆಗೆ ಹೇಗೆ ಅನ್ವಯಿಸುತ್ತದೆ? ಎಂಬುದನ್ನು ಪ್ರಶ್ನಿಸಿ ಬ್ಯಾಕ್‌ಲಾಗ್ ಹುದ್ದೆಗೆ ನೇಮಕಾತಿಯಾದ ನೌಕರರು ಕೋರ್ಟಿಗೆ ಹೋಗಿದ್ದಾರೆ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಸಂವಿಧಾನಬದ್ಧನಾದ ಮೀಸಲಾತಿ ಕೊಡಬೇಕು ಎಂಬ ನಿರ್ದೇಶನದ ಮೇರೆಗೆ ನಾನು 1998ರಲ್ಲಿ ಸಚಿವನಾಗಿದ್ದಾಗ, ಸಚಿವ ಸಂಪುಟವು ಎಲ್ಲಾ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಿ, ರಾಜ್ಯಾಂಗ ಬದ್ಧವಾದ ಹಕ್ಕುಗಳನ್ನು ರಕ್ಷಿಸಬೇಕು ಎಂಬ ತೀರ್ಮಾನವನ್ನು ತೆಗೆದುಕೊಂಡಿತ್ತು. ಈ ಹಿನ್ನೆಲೆಯಲ್ಲಿ ಸರ್ಕಾರದ ಕಂದಾಯ ಇಲಾಖೆಯು ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಿತ್ತು. ಯಾವುದೋ ಕಾರಣಕ್ಕೆ ಅದನ್ನು ಭರ್ತಿ ಮಾಡಿರಲಿಲ್ಲ. ಸಮಾಜ ಕಲ್ಯಾಣ ಇಲಾಖೆ ಆಯುಕ್ತರ ಆದೇಶದ ಪ್ರಕಾರವೇ ಬ್ಯಾಕ್‌ಲಾಗ್ ಹುದ್ದೆಗಳಿಗೆ ಭರ್ತಿಯಾಗಿರುವವರನ್ನು ಯಾವುದೇ ಕಾರಣಕ್ಕೂ terminate ಮಾಡಿ, ಬೀದಿ ಪಾಲಾಗುವಂತೆ ಮಾಡಬಾರದು. ಅವರ ರಾಜ್ಯಾಂಗ ಬದ್ಧವಾದ ಹಕ್ಕುಗಳನ್ನು ರಕ್ಷಿಸಲು ತೀರ್ಮಾನವನ್ನು ಕೈಗೊಂಡು, ಅವರು ಜೀವನ ನಡೆಸಲಿಕ್ಕೆ ಮತ್ತು ತಮ್ಮ ಸೇವೆಯನ್ನು ಮುಂದುವರೆಸಿಕೊಂಡು ಹೋಗಲಿಕ್ಕೆ ಅವಕಾಶವನ್ನು ಕೊಡಬೇಕೆಂದು ನಾನು ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎ.ನಾರಾಯಣ ಸ್ವಾಮಿ (ಸಮಾಜ ಕಲ್ಯಾಣ ಹಾಗೂ ಬಂದೀಖಾನೆ ಸಚಿವರು) :– ಮಾನ್ಯ ಅಧ್ಯಕ್ಷರೆ, ಚಾಮರಾಜನಗರ ಜಿಲ್ಲೆಯಲ್ಲಿ ಇರತಕ್ಕಂಥ 26 ಜನ ನೌಕರರು ಬ್ಯಾಕ್‌ಲಾಗ್ ಹುದ್ದೆಗಳಿಗೆ ಭರ್ತಿ ಆಗಿದ್ದಾರೆ. ಕಂದಾಯ ಇಲಾಖೆಯ ಜಿಲ್ಲಾಧಿಕಾರಿಗಳು ಈ ಬ್ಯಾಕ್‌ಲಾಗ್ ಹುದ್ದೆಗಳಲ್ಲಿ ಇರುವವರನ್ನು terminate ಮಾಡಿದ್ದಾರೆ. ಆದರೆ ಆಡಳಿತಾತ್ಮಕ ವ್ಯವಸ್ಥೆಯಲ್ಲಿ ತಪ್ಪುಗಳಾಗಿರುವುದರಿಂದ, ಅಲ್ಲಿಯ

ಜಿಲ್ಲಾಧಿಕಾರಿಗಳು ಇವರನ್ನು ತೆಗೆಯಬೇಕೆಂದು ಆದೇಶಿಸಿದರು. ಇದನ್ನು ಪ್ರಶ್ನಿಸಿ ನೌಕರರು KATಗೆ ಹೋದರು. KAT ಇದಕ್ಕೆ stay ನೀಡಿದೆ. KAT ಯಲ್ಲಿ ಈ ಪ್ರಕರಣ ಇನ್ನೂ ತೀರ್ಮಾನವಾಗಿಲ್ಲ. ಅಲ್ಲಿ ತೀರ್ಮಾನವಾದ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇವೆ. ಇದನ್ನು ನಮ್ಮ ಇಲಾಖೆಯಿಂದ regularize ಮಾಡಲಿಕ್ಕೆ ಆಗುವುದಿಲ್ಲ. ಇದನ್ನು ಜಿಲ್ಲಾಧಿಕಾರಿಗಳೇ regularize ಮಾಡಬೇಕಾಗಿದೆ. ಏನೇ ತಪ್ಪುಗಳಾಗಿದ್ದರೂ, ನೌಕರರು ಸೇವೆ ಸಲ್ಲಿಸಿ ಹಲವಾರು ವರ್ಷಗಳಾಗಿರುವುದರಿಂದ, ಇದನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ, ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಈ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು. ಸಂಬಂಧಪಟ್ಟ ಕಡತವನ್ನು ತರಿಸಿಕೊಂಡು, ಮುಂದಿನ ದಿನಗಳಲ್ಲಿ ಇವರ ಸಮಸ್ಯೆಯನ್ನು ಪರಿಹರಿಸಲು ಪ್ರಯತ್ನಿಸಲಾಗುವುದು.

4) ವಿಷಯ: ಕೈಗಾ ಅಣು ವಿದ್ಯುತ್ ಸ್ಥಾವರದಲ್ಲಿ ಹೋರಾಟ ನಡೆಯುತ್ತಿರುವ ಬಗ್ಗೆ

ಶ್ರೀ ಸುನಿಲ್ ವಿ.ಹೆಗಡೆ (ಹಳಿಯಾಳ) :- ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲೆಯ ಕೈಗಾ ಅಣು ವಿದ್ಯುತ್ ಸ್ಥಾವರದಲ್ಲಿ ನಡೆಯುತ್ತಿರುವ ಹೋರಾಟ 69ನೆ ದಿನಕ್ಕೆ ಕಾಲಿಟ್ಟಿದೆ. ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರೂ ಕೂಡ ಅಲ್ಲಿಗೆ ಭೇಟಿ ಕೊಟ್ಟಿದ್ದರು. ಅಲ್ಲದೆ ಮಾನ್ಯ ಮೀನುಗಾರಿಕೆ ಸಚಿವರಾದ ಆನಂದ ಅಸ್ನೋಟಿಕರ್‌ರವರೂ ಸಹ ಈ ಸಂಬಂಧ ದೆಹಲಿಗೆ ಹೋಗಿದ್ದರು. ಎಲ್ಲಾ ಎಂ.ಎಲ್.ಎ. ಗಳವರೂ ಸಹ ಹೋಗಿದ್ದೆವು. ಕೇಂದ್ರ ಸರ್ಕಾರದ ಮೇಲೆ ಒತ್ತಡ ಹಾಕುವಂತಹ ಕ್ರಮ ಮಾತ್ರವೇ ಉಳಿದಿದೆ. Sterilized Zone ನಲ್ಲಿ ಇರುವ ಜನರನ್ನು ಬೇರೆ ಕಡೆಗೆ shift ಮಾಡಿಲ್ಲ. ಅಲ್ಲಿರುವ ಜನರ ಆರೋಗ್ಯದ ಮೇಲೆ ಅಣು ವಿಕಿರಣ ಪರಿಣಾಮ ಬೀರುವಂತಹ ಸಾಧ್ಯತೆ ಇದೆ. ಕೈಗಾ ಅಣು ವಿದ್ಯುತ್ ಸ್ಥಾವರದ ನೌಕರರು ಯಾರಿದ್ದಾರೋ, ಅವರು ಯಾರೂ ಸಹ sterilized zone ನಲ್ಲಿ ಇರುವುದಿಲ್ಲ. ಎಲ್ಲರೂ ಆ ವಲಯದ ಹೊರಗಡೆಯೇ ಇದ್ದಾರೆ. ಜನರ ಆರೋಗ್ಯದ ಮೇಲೆ, ಅವರ ಕೃಷಿ ಚಟುವಟಿಕೆ ಮೇಲೆ, ಎಲ್ಲದರ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ. ಮಾನ್ಯ ಮುಖ್ಯಮಂತ್ರಿಗಳೇ ಈ ದಿಸೆಯಲ್ಲಿ